# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 338

2) ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)

3) ಉತ್ತರಿಸಬೇಕಾದ ದಿನಾಂಕ : 11-12-2024

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಯಾವ ಯಾವ ಯೋಜನೆಗಳ ಅಡಿಯಲ್ಲಿ ಮತ್ಸ್ಯ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಿದೆ; ಈ ಕಾರ್ಯಕ್ರಮಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ತೊಡಗಿಸಿರುವ ಅನುದಾನ ವೆಷ್ಟು; ಭೌತಿಕ-ಆರ್ಥಿಕ ಗುರಿಗಳೆಷ್ಟು; ಕಳೆದ 3 ವರ್ಷಗಳಲ್ಲಿ ಸಮುದ್ರದಿಂದ ಒಳನಾಡು ನೀರಿನಿಂದ ಉತ್ಪಾದನೆ ಮಾಡಿರುವ ಮೀನಿನ ಪ್ರಮಾಣವೆಷ್ಟು;<br><br>ಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಮತ್ತು ರಾಜ್ಯ ಸರ್ಕಾರದ ಮತ್ಸ್ಯ ಅಭಿವೃದ್ಧಿ ಕಾರ್ಯಕ್ರಮಗಳ ಮಾಹಿತಿಯನ್ನು **<u>ಅನುಬಂಧ-1</u>** ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಯೋಜನೆ ಅಡಿ ಇದುವರೆಗೂ ಸ್ಥಾಪಿಸಲಾಗಿರುವ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳು ಮತ್ತು ಉಪ್ಪು ನೀರು ಮೀನು-ಕೃಷಿಕರ ಅಭಿವೃದ್ಧಿ ಸಂಸ್ಥೆಗಳು ಎಷ್ಟು; ಮತ್ತು ಈ ಸಂಸ್ಥೆಗಳಿಗೆ ಯಾವ ರೀತಿ ಅರ್ಥಿಕ ನೆರವು ನೀಡಲಾಗಿದೆ;<br><br>(ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ, ಕೇಂದ್ರ ಸರ್ಕಾರದ ಯೋಜನೆ ಅಡಿ ಪ್ರಸ್ತುತ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳು (Fish Farmers Development Agency (FFDA)) ಮತ್ತು ಉಪ್ಪು ನೀರು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳು (Brackish water Fish Farmer Development Agency (BFDA)), ಕಾರ್ಯನಿರ್ವಹಿಸುತ್ತಿರುವುದಿಲ್ಲ. |
| ಇ) | ರಾಜ್ಯದಲ್ಲಿರುವ ಮೀನುಗಾರರಿಗೆ ಎಷ್ಟು ಪ್ರಮಾಣದ ಡೀಸಲ್ ಮೇಲಿನ ಕರವನ್ನು ಹಿಂದಿರುಗಿಸಲಾಗಿದೆ; ಯಾವ ಆಧಾರದ ಮೇರೆಗೆ ಹಿಂದಿರುಗಿಸಲಾಗಿದೆ;<br><br>(ಪೂರ್ಣ ಮಾಹಿತಿ ನೀಡುವುದು) | ಪ್ರಸ್ತುತ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ವಾರ್ಷಿಕ 2.00 ಲಕ್ಷ ಕಿಲೋಲೀಟರ್ ರಾಜ್ಯ ಮಾರಾಟ ಕರರಹಿತ ಡೀಸೆಲ್ ಅನ್ನು ಡೆಲಿವರಿ ಪಾಯಿಂಟ್ ನಲ್ಲಿಯೇ ವಿತರಿಸಲಾಗುತ್ತಿರುವುದರಿಂದ ರಾಜ್ಯ ಮಾರಾಟ ಕರವನ್ನು ದೋಣಿ ಮಾಲೀಕರಿಗೆ ಹಿಂದಿರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ) | ಮುಂಬರುವ ವರ್ಷದಲ್ಲಿ ಮೀನುಗಾರಿಕೆ ಯಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳು ಸ್ವಾವಲಂಬಿ ಜೀವನ ನಡೆಸಲು ಉಪಯೋಗವಾಗುವ ನೂತನ ಯೋಜನೆಗಳನ್ನು ಜಾರಿ ಮಾಡಲು ಸರ್ಕಾರ ಉದ್ದೇಶಿಸಿದೆಯೇ; ಇದ್ದಲ್ಲಿ, ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುವ ನೆರವುಗಳು ಯಾವವು?<br>(ಪೂರ್ಣ ಮಾಹಿತಿ ನೀಡುವುದು) | ಆಯಾ ವರ್ಷ ಆಯವ್ಯಯದಲ್ಲಿ ಮೀನುಗಾರಿಕೆ ಯಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳು ಸ್ವಾವಲಂಬಿ ಜೀವನ ನಡೆಸಲು ಉಪಯೋಗವಾಗುವ ನೂತನ ಯೋಜನೆಗಳನ್ನು ರೂಪಿಸಿ ಜಾರಿ ಮಾಡಲಾಗುತ್ತದೆ. |

ಸಂಖ್ಯೆ: ಪಸಂಮೀ ಇ-232 ಮೀಇಯೋ 2024

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 338 ಕ್ಕೆ

**ಅನುಬಂಧ-01**

**2024-25 ನೇ ಸಾಲಿನ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮತ್ಸ್ಯ ಅಭಿವೃದ್ಧಿ ಕಾರ್ಯಕ್ರಮಗಳು**

| ಕ್ರ.ಸಂ | ಯೋಜನೆ/ಕಾರ್ಯಕ್ರಮದ ಹೆಸರು | ಆಯವ್ಯಯ | ಆಕ್ಟೋಬರ್ 2024 ಅಂತ್ಯಕ್ಕೆ ಆರ್ಥಿಕ ಗುರಿ(ಲಕ್ಷ) | ಭೌತಿಕ ಗುರಿ (ಸಂ.) |
|---|---|---|---|---|
| **ರಾಜ್ಯ ವಲಯ** | | | | |
| 1 | ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ | 1370.00 | 885.00 | 10000 |
| 2 | ಸಾಂಪ್ರದಾಯಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು | 3000.00 | 2184.97 | 8030 |
| 3 | ಮೀನುಗಾರರ ಕಲ್ಯಾಣ ಕಾರ್ಯಕ್ರಮಕ್ಕೆ ಹೆಚ್ಚುವರಿ ರಾಜ್ಯದ ಪಾಲು (ಮತ್ಸ್ಯ ಆಶಾಕಿರಣ) * | 300.00 | 0.00 | 0 |
| 4 | ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಮಾರಾಟ ತೆರಿಗೆ ಮರುಪಾವತಿ | 0.00 | 0.00 | 3250 |
| 5 | ಸಂಕಷ್ಟ ಪರಿಹಾರ ನಿಧಿಗೆ ಅಂಶದಾನಗಳು | 400.00 | 1.00 | 0 |
| 6 | ತುಂಗಾ ಭದ್ರಾ ನಿಗಮದ ಮೀನುಗಾರಿಕೆಯ ಖರ್ಚಿನ ಪಾಲು | 1.00 | 0.00 | 0 |
| 7 | ವಿದ್ಯಾನಿಧಿ ಯೋಜನೆ - ಮೀನುಗಾರರು/ಮೀನು ಕೃಷಿಕರ ಮಕ್ಕಳಿಗೆ ಹೆಚ್ಚಿನ ಹಾಗೂ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನ | 100.00 | 25.00 | 1500 |
| 8 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ | 11.38 | 11.38 | 30 |
| 9 | ಮೀನುಗಾರಿಕೆ ಕೊಂಡಿ ರಸ್ತೆಗಳ, ಸೇತುವೆಗಳ ಮತ್ತು ಜೆಟ್ಟಿಗಳ ನಿರ್ಮಾಣ- ನಬಾರ್ಡ ಸಹಾಯ<br>4405-00-800-2-03 | 1636.00 | 409.00 | 3 |
| 10 | ಮೀನುಗಾರಿಕೆ ಬಂದರುಗಳ ಇಳಿದಾಣ ಕೇಂದ್ರಗಳ ನವೀಕರಣ ಮತ್ತು ಹೂಳೆತ್ತುವ ಕಾರ್ಯಕ್ರಮ<br>4405-00-104-0-02 | 1500.00 | 343.17 | 21 |
| | **ಒಟ್ಟು ರಾಜ್ಯ ವಲಯ** | **8318.38** | **3859.52** | **22834** |
| **ಕೇಂದ್ರ ವಲಯ** | | | | |
| 1 | ನೀಲಿ ಕ್ರಾಂತಿ ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ-ಕೇ.ಪು.ಯೋ. | 8333.00 | 867.38 | 1400 |
| 2 | ಉಳಿತಾಯ ಮತ್ತು ಪರಿಹಾರ ಯೋಜನೆ* | 612.00 | 0.00 | 24003 |
| 3 | ಮೀನುಗಾರಿಕೆ ಬಂದರುಗಳ ನಿರ್ಮಾಣ - ಕೇ.ಪು.ಯೋ<br>4405-00-103-6-01 | 3000.00 | 0.00 | 2 |
| | **ಒಟ್ಟು ಕೇಂದ್ರ ವಲಯ** | **11945.00** | **867.38** | **25405.00** |
| **ಜಿಲ್ಲಾ ವಲಯ** | | | | |
| 1 | ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ<br>2405-00-101-0-27 | 503.05 | 139.75 | 75 |
| 2 | ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ<br>2405-00-101-0-28 | 914.90 | 565.84 | 5134 |
| 3 | ಮೀನು ಮಾರುಕಟ್ಟೆಗಳ ಪುನರ್ ನಿರ್ಮಾಣ ಮತ್ತು ಮೀನುಮಾರಾಟಕ್ಕೆ ಒದಗುವ ಸಾಮಗ್ರಿಗಳ ಖರೀದಿಗೆ ಸಹಾಯ<br>2405-00-101-0-30 | 191.10 | 109.34 | 512 |
| 4 | ಪ್ರದರ್ಶನ ಮತ್ತು ತರಬೇತಿ<br>2405-00-101-0-32 | 150.25 | 94.30 | 493 |
| | **ಒಟ್ಟು ಜಿಲ್ಲಾ ವಲಯ** | **1759.30** | **814.93** | **6214** |
| | **ಒಟ್ಟಾರೆ** | **22022.68** | **5541.83** | **54453.00** |

(ಟನ್‌ಗಳಲ್ಲಿ)

| ಕ್ರ.ಸಂ | ಕಳೆದ 3 ವರ್ಷಗಳ ಮೀನು ಉತ್ಪಾದನೆ ವಿವರ | 2021-22 | 2022-23 | 2023-24 |
|---|---|---|---|---|
| 1 | ಕರಾವಳಿ | 589124 | 730104 | 542675 |
| 2 | ಒಳನಾಡು | 484622 | 494843 | 433323 |

*******

ಮೀನುಗಾರಿಕೆ ನಿರ್ದೇಶಕರು
ಬೆಂಗಳೂರು